# ಆರೋಗ್ಯ ಇಲಾಖೆಯ ಹೆಗ್ಗಣಗಳ ಮಧ್ಯೆ...




ಚಿತ್ರ: ಭಾವು ಪತ್ತಾರ್

ಒಮ್ಮೆ ನನಗೆ ತುಂಬಾ ಪರಿಚಯವಿದ್ದ ರಾಜಕೀಯ ವ್ಯಕ್ತಿಯೊಬ್ಬರು ತಾವು ತಯಾರಿಸುತ್ತಿದ್ದ 'ಬ್ಲೀಚಿಂಗ್ ಪುಡಿ'ಯ ಪೊಟ್ಟಣವನ್ನು ನನ್ನ ಮುಂದಿಟ್ಟು ಅದನ್ನು ಶಿಫಾರಸು ಮಾಡುವಂತೆ ಕೇಳಿದರು. ನೋಡಿದರೆ ಅದರಲ್ಲಿ ವಾಸನೆಯಿಲ್ಲ. ಪ್ಯಾಕಿಂಗ್ ಸಹ ಬೇಕಾಬಿಟ್ಟಿಯಾಗಿತ್ತು. 'ಆಯ್ಕೆ ವಿಷಯದ ಅಂತಿಮ ತೀರ್ಪು ಉನ್ನತಮಟ್ಟದ ಸಮಿತಿ (ಎಚ್‌ಪಿಸಿ)ಯದು' ಎಂದು ಹೇಳಿ ಅವರನ್ನು ಕಳುಹಿಸಿಕೊಟ್ಟೆ. ಅವರ ಉತ್ಪನ್ನವನ್ನು ಖರೀದಿಸಲಿಲ್ಲ ಎಂದು ನನ್ನ ಮೇಲೆ ಅವರಿಗೆ ಕೊನೆಯವರೆಗೂ ಕೋಪ ಉಳಿದಿತ್ತು!

ಇನ್ನು ಹಳೇ ಔಷಧಿಗಳನ್ನು ದಾಟಿಸುತ್ತಾರೆ ಎಂಬ ದೂರಿದೆ. ಔಷಧಿಗಳ ಎಕ್ಸ್‌ಪೈರಿ ದಿನಾಂಕ ಬರುವ ಮೂರು ತಿಂಗಳ ಮುಂಚೆಯೇ ಅದನ್ನು ಗಮನಿಸಿ ಅದನ್ನು ಬಳಸಬೇಕು, ಇಲ್ಲವೆ ವಾಪಸು ಕಳುಹಿಸಬೇಕು ಎಂಬ ನಿಯಮವಿದೆ. ಇದನ್ನು ಎಲ್ಲೆಡೆಯಲ್ಲೂ ಪಾಲಿಸಿದರೆ, ಸಮಸ್ಯೆಯೇ ಬರುವುದಿಲ್ಲ! ನಾನು ಜಿಎಂಎಸ್ ನಲ್ಲಿದ್ದಾಗ ಯಾವುದೋ ದೂರನ್ನು ಹಿಡಿದು ರಾಜಕೀಯ ವ್ಯಕ್ತಿಗಳ ತಂಡವೊಂದು ಅಲ್ಲಿಗೆ ಬಂದಿತು. ನಾನು ಅವರಿಗೆ 'ನೀವೇ ಹೋಗಿ ನೋಡಿ' ಎಂದು ಹೇಳಿದಾಗ ಅವರು ಸುತ್ತಾಡಿ, ಅಂಥಾ ಔಷಧಿಗಳು ಯಾವುವೂ ಅಲ್ಲಿಲ್ಲವೆಂದು ಹೇಳಿ ತೃಪ್ತಿಯಿಂದ ಹೊರಟುಹೋದರು.

ನಾನು ಹಣ ಪಡೆಯುತ್ತಿಲ್ಲ ಎಂದು ಸರಬರಾಜು ಕಂಪೆನಿಯವರಿಗೆ ತಿಳಿದಾಗ ಅವರು ಬೇರೆ ಆಮಿಷಗಳನ್ನು ಒಡ್ಡಲು ಪ್ರಾರಂಭಿಸಿದರು. 'ಆಲ್ ಇಂಡಿಯಾ ಟೂರ್ ಏರ್ಪಡಿಸುತ್ತೇವೆ' ಎಂದು ಅವರು ಹೇಳಿದಾಗ, 'ಎಲ್ಲಾ ಊರುಗಳನ್ನು ನೋಡಿ ಬಂದಿರುವ ನನಗೆ ಅದರಲ್ಲಿ  ಯಾವ ಆಕರ್ಷಣೆಯೂ ಇಲ್ಲ' ಎಂದೆ. ಇಷ್ಟು ಹೇಳಿದಾಕ್ಷಣ ನಾನು ಸಂತಳಂತೆ ಎಂದು ತಿಳಿದುಕೊಳ್ಳಬೇಡಿ. ದೀಪಾವಳಿಯ ಸುಂದರ ಮಿಠಾಯಿ ಪ್ಯಾಕೆಟ್‌ಗಳನ್ನು ಸ್ವೀಕರಿಸುತ್ತಿದ್ದೆ. ಅವರು ಹೊರತರುವ ಆಕರ್ಷಕ ಡೈರಿಗಳಿಗಾಗಿ ಕಾಯುತ್ತಿದ್ದೆ. ಬಾಲ್‌ಪೆನ್‌ಗಳಂತೂ ನನಗೆ 'ಬೇಡ' ಅನ್ನಲು ಬಾಯೇ ಬರುತ್ತಿರಲಿಲ್ಲ! ಇವುಗಳನ್ನು ನಿರಾಕರಿಸುವುದು ಸಜ್ಜನಿಕೆ ಅಲ್ಲ ಎಂದು ನನ್ನ ಭಾವನೆ. ಆದರೆ ಅವುಗಳನ್ನು ಸ್ವೀಕರಿಸಿ ಬಳಿಕ ಅವರ ಔಷಧಿ ಸಾಧನಗಳನ್ನೇ ಆಯ್ಕೆ ಮಾಡುವ ನಿರ್ಧಾರ ಮಾತ್ರ ನನ್ನದಾಗಿರುತ್ತಿರಲಿಲ್ಲ!

ಜಿಎಂಎಸ್ ಸ್ಥಾಪಿತವಾಗಿ ನೂರು ವರ್ಷಗಳಾಗಿದ್ದರಿಂದ ಒಂದು ವಿಶೇಷ ಸಮಾರಂಭವನ್ನು ಹಮ್ಮಿಕೊಂಡು, ಆಗ ಆರೋಗ್ಯ ಸಚಿವರಾಗಿದ್ದ ದಿ. ರಾಚಯ್ಯನವರನ್ನು ಆಹ್ವಾನಿಸಿದ್ದೆವು. ಅವರು ತಮ್ಮ ಭಾಷಣದಲ್ಲಿ 'ಈ ಯಮ್ಮನ ವಿಷಯ ಎಲ್ಲಾ ಕಡೆ ಕೇಳಿ ನೋಡಿದೆ. ಎಲ್ಲೂ ನನಗೆ ತಪ್ಪು ಸಿಗಲಿಲ್ಲ. ಇಂಥವರು ಇನ್ನಷ್ಟು ಕಾಲ ಇಲ್ಲೇ ಕೆಲಸ ಮಾಡಬೇಕು. ಆದರೆ ಸರ್ಕಾರದ ನಿಯಮದ ಪ್ರಕಾರ ಅವಧಿ ವಿಸ್ತರಣೆ ಸಾಧ್ಯ ಇಲ್ಲವಲ್ಲಾ?' ಎಂದು ಹೇಳಿದರು. ನನ್ನ ಹೃದಯ ತುಂಬಿ ಬಂತು. ಲಂಚದ ಮೂಲಕ ಕೋಟಿ ಕೋಟಿ ರೂಪಾಯಿಗಳನ್ನು ಗಳಿಸುವುದಕ್ಕಿಂತ ಇಂತಹ ಬಹಿರಂಗ ಶ್ಲಾಘನೆಯೇ ನನಗೆ ಅತ್ಯಂತ ಅಮೂಲ್ಯ ಎನ್ನಿಸಿತು.